# ನಲಿ–ಕಲಿ : ಕನ್ನಡ

## (ಅ) ಶಿಕ್ಷಕರಿಗೆ ಸೂಚನೆಗಳು :

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದ ಹಿನ್ನೆಲೆಯಲ್ಲಿ ನಲಿಕಲಿ ತರಗತಿಗಳ ಮಕ್ಕಳ ಕಲಿಕೆಯನ್ನು ಈ ಹಿಂದಿನಂತೆಯೇ ತರಗತಿ ವಾತಾವರಣದಲ್ಲಿ ಕಟ್ಟಿಕೊಡಲು ಸಾಧ್ಯವಾಗುತ್ತಿಲ್ಲ. ಮಕ್ಕಳು ಶಾಲೆಗೆ ಬರದಿದ್ದರೂ ಅವರ ಕಲಿಕೆಯಲ್ಲಿ ನಿರಂತರತೆಯನ್ನು ಕಾಪಾಡಿಕೊಳ್ಳುವ ಅನಿವಾರ್ಯತೆ ಮತ್ತು ಅವಶ್ಯಕತೆ ನಮ್ಮೆದುರು ಇದೆ. ಕಳೆದ ವರ್ಷ ಭೌತಿಕ ತರಗತಿಗಳು ವ್ಯವಸ್ಥಿತವಾಗಿ ನಡೆಯದೇ ಇರುವುದರಿಂದ ಜೊತೆಗೆ ಶಾಲೆಯಿಂದ ಮಕ್ಕಳು ಬಹಳ ದಿನ ಹೊರಗಿದ್ದುದರಿಂದ ಕೆಲವೊಂದು ಕಲಿಕಾ ಕೊರತೆಗಳನ್ನು ಹೊಂದಿರುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿ ಕೆಲವೊಂದು ಮರ್ಪಾಡುಗಳೊಂದಿಗೆ ಕಲಿಕಾ ಕೊರತೆಗಳನ್ನು ನೀಗಿಸಲು ಹಾಗೂ ಅವಶ್ಯಕ ಸಾಮರ್ಥ್ಯಗಳನ್ನು ಕಲಿಯಲು ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಡುವ ಸಲುವಾಗಿ ಈ ಕೆಳಗಿನ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ.

- ಕಳೆದ ಸಾಲಿನಂತೆ ಈ ಸಾಲಿನಲ್ಲಿಯೂ ಅಭ್ಯಾಸ ಸಹಿತ ಪಠ್ಯಪುಸ್ತಕಗಳನ್ನು ಮಕ್ಕಳಿಗೆ ವಿತರಿಸಲಾಗುತ್ತದೆ. ಕೋವಿಡ್ ಸಂದಿಗ್ಧ ಸಂದರ್ಭದಲ್ಲಿ ಮಕ್ಕಳು ಮನೆಯಲ್ಲೇ ಇದ್ದು ಸ್ವಯಂ ಕಲಿಕೆಯಲ್ಲಿಯೇ ತೊಡಗುವದರಿಂದ 60 ದಿನಗಳಿಗೆ ಕಲಿಯಲೇ ಬೇಕಾದ ಸಾಮರ್ಥ್ಯಗಳನ್ನು ಗುರುತಿಸಿಕೊಂಡು ಸ್ವಕಲಿಕಾ ಚಟುವಟಿಕೆಗಳನ್ನು ಒಳಗೊಂಡ ಅಭ್ಯಾಸದ ಹಾಳೆಗಳನ್ನು ನಲಿಕಲಿಗೆ ನೀಡಲಾಗುತ್ತಿದೆ.
- ಇದರಲ್ಲಿ ಆರಂಭದ 10 ದಿನಗಳನ್ನು ಪೂರ್ವಭಾವಿ ಚಟುವಟಿಕೆಗಳಿಗಾಗಿಯೂ ಹಾಗೂ ಕಳೆದ ವರ್ಷದ ಕಲಿಕಾ ಕೊರತೆಗಳನ್ನು ನೀಗಿಸುವ ಸಲುವಾಗಿ 50 ದಿನಗಳನ್ನು ಬಳಸಿಕೊಳ್ಳಲಾಗಿದೆ.
- ಜುಲೈ 01ರಿಂದ ಮಕ್ಕಳಿಗೆ ಈ ಚಟುವಟಿಕಾ ಹಾಳೆಗಳನ್ನು ತಮ್ಮದೇ ಆದ ಸೂಕ್ತ ಮಾರ್ಗಗಳ ಮೂಲಕ ಶಿಕ್ಷಕರು ಮಕ್ಕಳಿಗೆ ತಲುಪಿಸಬೇಕಾಗಿದೆ.
- ಹೀಗೆ ಪ್ರತಿ ಮೈಲಿಗಲ್ಲು ಅಥವಾ ಪ್ರತಿವಾರದ ಚಟುವಟಿಕೆಗಳನ್ನು ಆನ್‌ಲೈನ್ ಅಲ್ಲಿ ಅಥವಾ ಭೌತಿಕವಾಗಿ ತಲುಪಿಸಿ ಆ ಚಟುವಟಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ಮಕ್ಕಳು ಪೂರ್ಣಗೊಳಿಸಿದ ನಂತರ ಮರಳಿ ಪಡೆದು ಮೌಲ್ಯಮಾಪನ ಮಾಡಿ ಹಿಮ್ಮಾಹಿತಿಯನ್ನು ನೀಡಬೇಕಿದೆ.
- **ಮೌಲ್ಯಮಾಪನ ಮಾಡಿದ ನಂತರ ಪ್ರತಿ ಮಗುವಿನ ಕಲಿಕೆಯಲ್ಲಿ ಆಗಿರುವ ಪ್ರಗತಿಯನ್ನು ಖಾತರಿ ಪಡಿಸಿಕೊಂಡು ಮುಂದಿನ ಕಲಿಕೆಗೆ ತೊಡಗಿಸಿಕೊಳ್ಳವಂತೆ ಹಿಮ್ಮಾಹಿತಿ ನೀಡಿ ದಾಖಲಿಸಿಕೊಳ್ಳಬೇಕು.**
- ಮಾರ್ಗದರ್ಶಕರು (ಪಾಲಕರು /ಸ್ವಯಂಸೇವಕರು) ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಸಲುವಾಗಿ ಚಟುವಟಿಕೆಗಳ ನಿರ್ವಹಣೆ ಕುರಿತು ಪಾಲಕರಿಗಾಗಿಯೆ ಪ್ರತ್ಯೇಕ ಸೂಚನೆಗಳನ್ನು ಸಹ ಅಭ್ಯಾಸದ ಹಾಳೆಯಲ್ಲಿ ನೀಡಲಾಗಿದೆ.
- **ಮಕ್ಕಳಿಕಗೆ ಈ ಚಟುವಟಿಕಾ ಹಾಳೆಗಳನ್ನು ತಲುಪಿಸಿದ ಮತ್ತು ಮರಳಿ ಪಡೆದ ಬಗ್ಗೆ ಸೂಕ್ತ ದಾಖಲೆಗಳನ್ನು ಇರಿಸಿಕೊಳ್ಳಬೇಕು.**
- ಮರಳಿ ಪಡೆದ ಈ ಅಭ್ಯಾಸದ ಹಾಳೆಗಳನ್ನು ಮಕ್ಕಳ ಪೋರ್ಟ್‌ಪೋಲಿಯೋದಲ್ಲಿ ಸಂಗ್ರಹಿಸಿಡಬೇಕು.
- **ಸೇತುಬಂಧ ಕಲಿಕೆಯಲ್ಲಿ ಅಂದರೆ, 60 ದಿನಗಳ ಕಲಿಕಾ ಪ್ರಕ್ರಿಯೆಯಲ್ಲಿ ಒಟ್ಟು 04 ಮೌಲ್ಯಮಾಪನ ಹಂತವನ್ನು ಗುರುತಿಸಿಕೊಳ್ಳಲಾಗಿದೆ. 15 ದಿನ ನಂತರ, 30 ದಿನಗಳ ನಂತರ, 45 ದಿನಗಳ ನಂತರ ಹಾಗೂ 60 ದಿನಗಳ ನಂತರ ಇದನ್ನು ಕಡ್ಡಾಯವಾಗಿ ಅನುಷ್ಠಾನಿಸುವುದು.**
- ಪ್ರತೀ ಮೌಲ್ಯಮಾಪನದ ಹಂತದಲ್ಲಿ ಕಲಿಕೆಯನ್ನು ಒರೆ ಹಚ್ಚಲು ಮಗುವಿನ ಮನೆಗೆ ಪೂರಕ ಅಭ್ಯಾಸ/ಚಟುವಟಿಕಾ ಹಾಳೆಗಳನ್ನು ಆನ್ಲೈನ್ ಅಥವಾ ಆಫ್ಲೈನ್ ಮೂಲಕ ತಲುಪಿಸುವುದು. ಅವುಗಳನ್ನು ಪೂರ್ಣಗೊಳಿಸಿದ ನಂತರ ಪುನಃ ಪಡೆಯುವ ಮೂಲಕ ಮಕ್ಕಳ ಕಲಿಕೆಯ ಸಾಧನೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು. ಪೂರಕ ಹಿಮ್ಮಾಹಿತಿ ನೀಡುವ ಮೂಲಕ ಕಲಿಕೆಯನ್ನು ನಿರ್ದಿಷ್ಟ ಉದ್ದೇಶದ ಕಡೆಗೆ ಪ್ರೇರೇಪಿಸುವುದು.
- ಮಕ್ಕಳು ಯಾವುದೇ ಸಾಮರ್ಥ್ಯದಲ್ಲಿ 'ಬಿ' ಶ್ರೇಣಿ ಪಡೆದರೆ ಮತ್ತೆ ಆ ಮಗುವಿಗೆ ಸೂಕ್ತ ಹಿಮ್ಮಾಹಿತಿ ನೀಡಿ ಬದಲಿ ಚಟುವಟಿಕೆ ನೀಡಿ ಕಲಿಯಲು ಅವಕಾಶ ಮಾಡಿಕೊಡಬೇಕು.

- ಅಭ್ಯಾಸದ ಹಾಳೆಗಳಲ್ಲಿ ಹೆಚ್ಚುವರಿ ಚಟುವಟಿಕೆಯಾಗಿ ಕ್ಯೂ.ಆರ್ ಕೋಡ್‌ಗಳನ್ನು ನೀಡಲಾಗಿದೆ. ಅವುಗಳನ್ನು ಮೊಬೈಲ್ ಅಲ್ಲಿ ಸ್ಕ್ಯಾನ್ ಮಾಡಿ ಅದರಲ್ಲಿರುವ ವೀಡಿಯೊ/ಆಡಿಯೊ/ರೇಡಿಯೊ ಪಾಠಗಳನ್ನು ನೋಡಲು/ಕೇಳಲು ಅವಕಾಶ ಮಾಡಿಕೊಡುವ ಸಲುವಾಗಿ ಸೂಕ್ತ ಮಹಿತಿಯನ್ನು ಮಾರ್ಗದರ್ಶಕರಿಗೆ ನೀಡಬೇಕು.

## (ಆ) ಪಾಲಕರಿಗೆ/ಸ್ವಯಂ ಸೇವಕರಿಗೆ ಸೂಚನೆಗಳು :

- ಅಭ್ಯಾಸದ ಹಾಳೆಗಳಲ್ಲಿರುವ ಚಟುವಟಿಕೆಗಳನ್ನು ನಿರ್ವಹಿಸಲು ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ಮಗುವಿನ ತರಗತಿ ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಮಕ್ಕಳ ಕಲಿಕೆ ಕುರಿತು ಹಿಮ್ಮಾಹಿತಿ ನೀಡಿ ಚರ್ಚಿಸುವುದು.
- ಮಗುವಿನ ಚಟುವಟಿಕೆಗೆ ಅಗತ್ಯವಿರುವ ಸಾಮಗ್ರಿಗಳನ್ನು ಒದಗಿಸುವುದು.
- ಮನೆಯ ಪರಿಸರದಲ್ಲಿರುವ ವಸ್ತುಗಳನ್ನು ಬಳಸಿ ಮಗುವಿನ ಕಲಿಕೆಗೆ ಅನುವು ಮಾಡಿಕೊಡುವುದು.
- ಅಬ್ಯಾಸದ ಹಾಳೆಗಳಲ್ಲಿ ಮಕ್ಕಳಿಗೆ ಅರ್ಥವಾಗುವಂತಹ ಚಟುವಟಿಕೆಗಳನ್ನೇ ನೀಡಲಾಗಿದೆ. ಕಲಿಸುವವರಿಗೂ ಅಲ್ಲಿ ಸೂಚನೆಗಳನ್ನು ನೀಡಿದೆ. ಅದನ್ನು ನಿರ್ವಹಿಸಲು ಮಕ್ಕಳಿಗೆ ನೆರವಾಗುವುದು.
- ಮಕ್ಕಳಿಗೆ ಅವಶ್ಯಕತೆ ಇದ್ದಾಗ ಚಟುವಟಿಕೆಗಳಲ್ಲಿನ ಕ್ಯೂ.ಆರ್.ಕೋಡ್‌ಗಳನ್ನು ಸ್ಕ್ಯಾನ್ ಮಾಡಲು ಅವಕಾಶ ಮಾಡಿಕೊಡುವುದು.
- ಮಕ್ಕಳಿಗೆ ಅವಶ್ಯಕತೆ ಬಿದ್ದಾಗ ಸೂಕ್ತ ಮಾರ್ಗದರ್ಶನ ನೀಡಿ ಕಲಿಕೆಯನ್ನು ಪ್ರೇರೇಪಿಸುವುದು.
- ಆಗಾಗ ಶಿಕ್ಷಕರನ್ನು ಭೇಟಿ (ದೂರವಾಣಿ ಮೂಲಕ ಅಥವಾ ಖುದ್ದು) ಮಾಡಿ ಸೂಕ್ತ ಮಾರ್ಗದರ್ಶನ ಪಡೆಯುವುದು.
- ಅವಶ್ಯಕತೆ ಇದ್ದಾಗಲೆಲ್ಲ ಮೊಬೈಲ್ ಅನ್ನು ಮಕ್ಕಳಿಗೆ ನೀಡಿ ಅವರು ಅದನ್ನು ಕಲಿಕಾ ಚಟುವಟಿಕೆಗಳಿಗೆ ಬಳಸುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಮೌಲ್ಯಮಾಪನ ಹಾಳೆಗಳನ್ನು ನೀಡಿದಾಗ ಅವುಗಳಲ್ಲಿರುವ ಚಟುವಟಿಕೆಗಳನ್ನು ಮಕ್ಕಳೇ ನಿರ್ವಹಿಸುವಂತೆ ಮಾರ್ಗದರ್ಶನ ನೀಡುವುದು.

*******************************************